


## ಕ್ಯಾಂಪಸ್‌ನಲ್ಲಿ...

- ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಹಾಗು ಲೈಬ್ರರಿ
- ಯುವಕ ಹಾಗೂ ಯುವತಿಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ
- ಆಪ್ತ ಸಮಾಲೋಚನೆ
- ಸುರಕ್ಷತೆಗಾಗಿ ಸಿಸಿ ಟಿವಿ ವ್ಯವಸ್ಥೆ
- ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ
- ಪರಿಸರ ಸ್ನೇಹಿ ವಾತಾವರಣ
- ಇಂಟರ್ನ್‌ಶಿಪ್ ಸೌಲಭ್ಯ
- ವೃತ್ತಿ - ಉದ್ಯೋಗ ಮಾರ್ಗದರ್ಶನ
- ಗುಣಮಟ್ಟದ ಆಹಾರ



ಬದುಕಿನಲ್ಲಿ ಕಲಿತ ನಮ್ಮ ಹಳೆಯ ಕಲಿಕಾರ್ಥಿಗಳನ್ನು ನಮ್ಮ ಒಡನಾಡಿಗಳೆಂದೇ ನಾವು ಭಾವಿಸುತ್ತೇವೆ. ನಮ್ಮ ಒಡನಾಡಿಗಳು ಕಳೆದ ಹತ್ತು ವರ್ಷಗಳಿಂದ ಕರ್ನಾಟಕದ ವಿವಿಧ ಭಾಗಗಳಲ್ಲಿ ಸಾಮಾಜಿಕ ಹಾಗೂ ಪರಿಸರ ನ್ಯಾಯದ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ತಮ್ಮ ವೃತ್ತಿ - ಜೀವನೋಪಾಯದ ಹೊಸ ಸಾಧ್ಯತೆಗಳ ಮೂಲಕ ತಮ್ಮ ಸುತ್ತಮುತ್ತಲಿನ ಸಮಾಜ - ಪರಿಸರದ ಮೇಲೆ ಪ್ರಭಾವ ಬೀರುತ್ತಿದ್ದಾರೆ.




**ಬದುಕು - ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್**

ಸಂವಾದ ಬದುಕು ಕ್ಯಾಂಪಸ್,
ನಂ. 95/05, ಬಂಜಾರಪಾಳ್ಯ (ಬಸ್ ನಿಲ್ದಾಣದ ಹತ್ತಿರ), ಅಗರ ಗ್ರಾಮ, ತಾತಗುಣಿ ಪೋಸ್ಟ್
ಬೆಂಗಳೂರು - 560 082

**ಹತ್ತಿರದ ಮೆಟ್ರೋ ನಿಲ್ದಾಣ: ಸಿಲ್ಕ್ ಇನ್ಸ್‌ಟಿಟ್ಯೂಟ್**

+91 73378 35677
contact@samvadabaduku.org
www.samvadabaduku.org


**Baduku** Centre for Livelihoods Learning
An Initiative of Samvada

# ಬದುಕು
# ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್

An Initiative of Samvada





## ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್

ಹಲವು ಕೋರ್ಸ್‌ಗಳ ಮೂಲಕ ತಳ ಸಮುದಾಯಗಳ ಯುವಜನರಿಗೆ ಅರ್ಥಪೂರ್ಣ ಹಾಗೂ ಘನತೆಯ ಬದುಕನ್ನು ಕಟ್ಟಿಕೊಳ್ಳಲು ನೆರವಾಗುತ್ತಿದೆ. ನಮ್ಮ ಕೋರ್ಸ್‌ಗಳು ಸಮಾಜದ ಅಂಚಿನಲ್ಲಿರುವ ಯುವಜನರಿಗೆ ಸಾಮಾಜಿಕವಾಗಿ ಪ್ರಮುಖ ಎನಿಸಿರುವ ವೃತ್ತಿಕ್ಷೇತ್ರವನ್ನು ಪ್ರವೇಶಿಸಲು ಮತ್ತು ಪ್ರಭಾವಿಸಲು ಸಹಾಯ ಮಾಡುತ್ತವೆ. ಬದುಕು - ಸಾಮಾಜಿಕ ಅಗತ್ಯತೆಗಳನ್ನು ಮತ್ತು ಸುಸ್ಥಿರತೆಯನ್ನು ಗಮನದಲ್ಲಿರಿಸಿಕೊಂಡು ವಿವಿಧ ಕೋರ್ಸುಗಳ ಮೂಲಕ ಪರಿಸರ ಮತ್ತು ಜನಪರವಾದ ವೃತ್ತಿ-ಜೀವನೋಪಾಯ ಕೌಶಲ್ಯಗಳನ್ನು ಕಲಿಸುತ್ತಿರುವ 'ಸಂವಾದ'ದ ಜೀವನೋಪಾಯ ಕಲಿಕಾ ಕೇಂದ್ರವಾಗಿದೆ.

## ಕಲಿಕೆಯ ಬದುಕು

ಕಲಿಕೆಯ ವ್ಯಾಖ್ಯೆಯನ್ನು ಶೋಧಿಸುವ, ಮರುರೂಪಿಸುವ ಬದುಕಿನ ಪ್ರಕ್ರಿಯೆಯು ಅನುಭವ ಆಧಾರಿತ, ಪಾಲ್ಗೊಳ್ಳುವಿಕೆ ಹಾಗೂ ಸೃಜನಶೀಲ ಪಠ್ಯಕ್ರಮವನ್ನು ಒಳಗೊಂಡಿದೆ. ನಮ್ಮ ಅಂತರ್‌ಶಿಸ್ತೀಯ ಕಲಿಕಾ ವಿಧಾನವು ಭಾವನೆಗಳೊಂದಿಗೆ ಆಲೋಚನೆಗಳು ಹಾಗೂ ನಂಬಿಕೆಗಳೊಂದಿಗೆ ಅನುಭವಗಳು ಬೆರೆತ ಕಲಿಕೆಯ ಮಾದರಿಯಾಗಿದೆ. ನಮ್ಮ ಪಠ್ಯಕ್ರಮವು ಜ್ಞಾನ ಮತ್ತು ತಾಂತ್ರಿಕ ಕೌಶಲ್ಯಗಳ ಜತೆಗೆ ಸ್ವಅರಿವು ಮತ್ತು ಸಾಮಾಜಿಕ ದೃಷ್ಟಿಕೋನದ ಅಂಶಗಳನ್ನು ಒಳಗೊಂಡಿದೆ.

ಬದುಕಿನಲ್ಲಿ ಕಲಿಕೆಯು ತರಗತಿಯ ಆಚೆಗೂ ನಡೆಯುತ್ತದೆ. ಹಾಸ್ಟೆಲ್, ಲೈಬ್ರರಿ ಹಾಗೂ ಲ್ಯಾಬ್‌ನಂಥ ಸ್ಥಳಗಳಲ್ಲಿ ನಡೆಯುವ ಬಹುತ್ವ ಮತ್ತು ವೈವಿಧ್ಯಮಯ ಜೀವನ ಅನುಭವಗಳ ಹಂಚಿಕೆ, ಮಾತುಕತೆ, ಸಂವಾದಗಳು ಕಲಿಕಾರ್ಥಿಗಳ ಕಲಿಕೆಯನ್ನು ಸಕಾರಾತ್ಮಕವಾಗಿ ಪ್ರಭಾವಿಸುತ್ತವೆ. ಕಲಿಕಾರ್ಥಿಗಳು ತಮ್ಮ ಕೋರ್ಸ್‌ನ ಸಮಯದಲ್ಲಿ ಮತ್ತು ನಂತರದ ವೃತ್ತಿ ಆರಂಭದ ದಿನಗಳಲ್ಲಿ ವೈವಿಧ್ಯಮಯ ಜ್ಞಾನಶಿಸ್ತಿನ ಹಿನ್ನೆಲೆಯ ನಮ್ಮ ಅನುಭವಿ ಅಧ್ಯಾಪಕರಿಂದ ಮೆಂಟರಿಂಗ್ ಪಡೆಯುತ್ತಾರೆ.

## ಸಹಯೋಗ

ನಮ್ಮ ಸಂಸ್ಥೆಯ ವಿವಿಧ ಕೋರ್ಸ್‌ಗಳಿಗೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಕೈಜೋಡಿಸುವ ಉನ್ನತ ಶಿಕ್ಷಣ ಸಂಸ್ಥೆಗಳು / ಶೈಕ್ಷಣಿಕ ಕೇಂದ್ರಗಳು / ಅಕಾಡೆಮಿಗಳ ಜತೆಗೆ ಸಹಯೋಗಕ್ಕೆ ನಾವು ಸಿದ್ಧರಿದ್ದೇವೆ.

## ಕೋರ್ಸ್‌ಗಳು

- **ಅಭಿವ್ಯಕ್ತಿ - ಜರ್ನಲಿಸಮ್ ಕೋರ್ಸ್**
- **ದೃಶ್ಯ - ಸ್ಕ್ರೀನ್ ರೈಟಿಂಗ್ & ಡೈರೆಕ್ಷನ್ ಕೋರ್ಸ್**
- **ಲರ್ನಿಂಗ್ ಲೆನ್ಸ್ ಕೋರ್ಸ್**
- **ವೇಸ್ಟ್ ಸಪ್ಲೈ ಚೈನ್ & ಮ್ಯಾನೇಜ್‌ಮೆಂಟ್ ಕೋರ್ಸ್**
- **ಡೆವಲಪ್ಮೆಂಟ್ ಪ್ರಾಕ್ಟಿಷನರ್ಸ್ ಕೋರ್ಸ್**
- **ಹಿತ - ಮೆಂಟಲ್ ಹೆಲ್ತ್ ಪ್ಯಾರಾ ಪ್ರೊಫೆಷನಲ್ ಕೋರ್ಸ್**
- **ಸೋಷಿಯಲ್ ಜಸ್ಟಿಸ್ & ಲಾ ಕೋರ್ಸ್**
- **ಬದುಕು ಬೇಸಾಯ ಶಾಲೆ**
- **ಲೀಡರ್‌ಶಿಪ್ ರಿಜ್ಯುವಿನೇಷನ್ ಇನ್ ಅಗ್ರಿಕಲ್ಚರ್**
- **ಸ್ಪರ್ಧಾ ಬದುಕು - ಕಾಂಪಿಟೇಟಿವ್ ಎಗ್ಸಾಮ್ ಕೋರ್ಸ್**

**(ಈ ಕೋರ್ಸ್‌ಗಳನ್ನು ಆನ್‌ಲೈನ್, ಮಾಡ್ಯುಲರ್ ಮತ್ತು ರೆಗ್ಯುಲರ್ ಮೋಡ್ ಮೂಲಕ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನೀಡಲಾಗುತ್ತದೆ)**

